**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.389/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಲೋಕನಾಥ್ ಬಿ. | ಫ್ರಾಸಾ-7 |
| ತಂದೆಯ ಹೆಸರು | : ನಂಜಪ್ಪ | ಚಾಸಾ-11 |
| ವಯಸ್ಸು | : 62 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ನಿವೃತ್ತ ಎ.ಎಸ್.ಐ | ದಿನಾಂಕಃ 03.09.2025 |
| ವಾಸಸ್ಥಳ | : ಚಿಕ್ಕಮಗಳೂರು. | |

**:ಮುಖ್ಯ ವಿಚಾರಣೆ: ಪ್ರಾಭ್ಯಾ.ಸ.ಸ.ಅ. ರವರಿಂದ:**

ನಾನು 2018 ರಿಂದ ನವೆಂಬರ್ 2020 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ.22.11.2021 ರಂದು ಚಾಸಾ-24 ರವರು ಈ ಪ್ರಕರಣದ ಆರೋಪಿಯ ಪತ್ತೆಗಾಗಿ ನನ್ನನ್ನು ಮತ್ತು ಚಾಸಾ-12 ರವರನ್ನು ನೇಮಕ ಮಾಡಿ ಠಾಣೆಯಿಂದ ಕಳುಹಿಸಿಕೊಟ್ಟಿದ್ದು, ಅದರಂತೆ ನಾವುಗಳು ದಾರದಹಳ್ಳಿ ಗ್ರಾಮದ ಕಿತ್ತಲೆಗಂಡಿಗೆ ಹೋಗಿ ಬಾತ್ಮೀದಾರರನ್ನು ವಿಚಾರಿಸಿ ಬಾತ್ಮೀಯಂತೆ ಆರೋಪಿಯ ಮನೆಯ ಬಳಿ ಹೋಗಿ ಆರೋಪಿಗೆ ಪ್ರಕರಣದ ಬಗ್ಗೆ ವಿಚಾರ ತಿಳಿಸಿ ಅವರನ್ನು ವಶಕ್ಕೆ ಪಡೆದು ಸ.6.30 ರ ಸಮಯಕ್ಕೆ ಠಾಣೆಗೆ ವಾಪಸ್ಸಾಗಿ ಆರೋಪಿಯನ್ನು ವರದಿಯೊಂದಿಗೆ ಚಾಸಾ-24 ರವರ ಸಮಕ್ಷಮ ಹಾಜರುಡಿಪಸಿರುತ್ತೇನೆ.

ಸಾಕ್ಷಿಯು ದಿ.22.11.2021 ರ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-14, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ಚಾಸಾ-24 ರವರು ನಮಗೆ ಲಿಖಿತವಾಗಿ ನೇಮಕ ಮಾಡಿದ್ದರು. ಸದರಿ ಜ್ಞಾಪನವನ್ನು ವಾಪಸ್ಸು ನೀಡಿಲ್ಲ. ನಾವು ಆರೋಪಿಯ ಪೋಟೋವನ್ನು ತೆಗೆದುಕೊಂಡು ಹೋಗಿರಲಿಲ್ಲ, ಆದರೆ ಅವರ ಬಗ್ಗೆ ಬಾತ್ಮೀ ಇತ್ತು. ಆ ದಿನ ಆರೋಪಿ ಇದ್ದ ಮನೆಯ ದಾಖಲೆಗಳನ್ನು ಪರಿಶೀಲಿಸಲಿಲ್ಲ. ನಾನು ಹೇಳಿದಂತೆ ಆರೋಪಿಯನ್ನು ವಶಕ್ಕೆ ಪಡೆಯದೇ ಇದ್ದರು ಮೇಲಾಧಿಕಾರಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.